# ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯ

## ಪತ್ರಿಕಾ ಪ್ರಕಟಣೆ

### ಕೋವಿಡ್-19 ಸಾಂಕ್ರಾಮಿಕದ ಸಂದರ್ಭದಲ್ಲಿ ಕೊರತೆಗಳ ನಡುವೆಯೂ ಸುರಕ್ಷೆಯ ಜಾಲವಾಗಿ ಮನ್‌ರೇಗಾದ ಪಾತ್ರ ಅತಿಮುಖ್ಯವೆನ್ನುವುದನ್ನು ಅಧ್ಯಯನವೊಂದು ತೋರಿಸಿದೆ

ನವದೆಹಲಿ & ಬೆಂಗಳೂರು, ಅಕ್ಟೋಬರ್ 13: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ 2005ರ ಅಡಿಯಲ್ಲಿ ಉದ್ಯೋಗ ಕಾರ್ಡ್ ಹೊಂದಿರುವ ಎಲ್ಲಾ ಮನೆಗಳಲ್ಲಿ ಸುಮಾರು ಶೇ 39ರಷ್ಟು 2020-21ರ ಕೋವಿಡ್ ವರ್ಷದಲ್ಲಿ ಒಂದು ದಿನದ ಕೆಲಸವನ್ನೂ ಪಡೆಯಲಿಲ್ಲ. ಅಲ್ಲದೆ, ಕೆಲಸ ಮಾಡಿದ ಸರಾಸರಿ ಶೇ 36ರಷ್ಟು ಮನೆಗಳು ಮಾತ್ರ 15 ದಿನಗಳೊಳಗೆ ತಮ್ಮ ವೇತನ ಪಡೆದುಕೊಂಡಿವೆ ಎಂದು ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯವು ರಾಷ್ಟ್ರೀಯ ನಾಗರಿಕ ಸಮಾಜದ ಸಂಘಟನೆಗಳ ಒಕ್ಕೂಟದ ಜೊತೆಗೆ ನಾರೇಗ ಮತ್ತು ಸಹಭಾಗಿತ್ವದ ಸಂಶೋಧನೆ ಮತ್ತು ಪ್ರಸರಣ (ಸಿಒಆರ್‌ಡಿ) ಜೊತೆಗೆ ನಾಲ್ಕು ರಾಜ್ಯಗಳ ಎಂಟು ಬ್ಲಾಕ್‌ನ 2000 ಮನೆಗಳಲ್ಲಿ ನಡೆಸಿದ ಅಧ್ಯಯನದಲ್ಲಿ ತಿಳಿದು ಬಂದಿದೆ.

ಕೊರತೆಗಳ ನಡುವೆಯೂ ಅಧ್ಯಯನದಲ್ಲಿ ಮನ್‌ರೇಗಾ ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ಪ್ರಮುಖ ಆದಾಯವನ್ನು ಕಳೆದುಕೊಂಡಿದ್ದ ಅತೀ ದುರ್ಬಲ ವರ್ಗದ ಮನೆಗಳನ್ನು ರಕ್ಷಿಸುವ ಮೂಲಕ ಗುರುತರವಾದ ವ್ಯತ್ಯಾಸವನ್ನು ತಂದಿರುವುದು ಕಂಡುಬಂದಿದೆ. ಮನರೇಗದಿಂದ ಗಳಿಗೆ ಹೆಚ್ಚಾಗಿರುವುದರಿಂದ ಬ್ಲಾಕ್‌ಗಳಲ್ಲಿ ಶೇ 20ರಿಂದ 80ರವರೆಗಿನ ಆದಾಯ ನಷ್ಟಕ್ಕೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿದೆ.

ಈ ಕೆಳಗಿನ ಬ್ಲಾಕ್‌ಗಳಲ್ಲಿ ಸಮೀಕ್ಷೆಯನ್ನು ನವೆಂಬರ್- ಡಿಸೆಂಬರ್ 2021ರಲ್ಲಿ ನಡೆಸಲಾಗಿದೆ: ಬಿಹಾರದ ಫುಲ್ ಪರಸ್ (ಮಧುಬನಿ) ಮತ್ತು ಛಾತ್‌ಪುರ್ (ಸುಪೌಲ್), ಕರ್ನಾಟಕದ ಬೀದರ್ (ಬೀದರ್) ಮತ್ತು ದೇವದುರ್ಗ (ರಾಯಚೂರು), ಮಧ್ಯಪ್ರದೇಶದ ಖಾಲ್ವಾ (ಖಾಂಡ್ವಾ) ಮತ್ತು ಘಾಟಿಗಾಂವ್ (ಗ್ವಾಲಿಯರ್), ಮಹಾರಾಷ್ಟ್ರದಲ್ಲಿ ವಾರ್ದಾ (ವಾರ್ದಾ) ಮತ್ತು ಸುರ್ಗನ (ನಾಶಿಕ್). ಅಧ್ಯಯನದ ಮಾದರಿ ವಿಧಾನವು ಕಂಡುಕೊಂಡಿರುವ ವಿವರಗಳು ಬ್ಲಾಕ್‌ನಲ್ಲಿರುವ ಉದ್ಯೋಗ ಕಾರ್ಡ್‌ಗಳನ್ನು ಹೊಂದಿರುವ ಎಲ್ಲಾ ಮನೆಗಳನ್ನೂ ಪ್ರತಿನಿಧಿಸಿರುವುದನ್ನು ಖಚಿತಪಡಿಸಿದೆ.

"ನಮ್ಮ ಅಧ್ಯಯನದಲ್ಲಿ ಮನರೇಗಾದ ಅಗತ್ಯ ಮತ್ತು ಉಪಯುಕ್ತತೆ ಬಗ್ಗೆ ಕೆಲಸಗಾರರು ಎಷ್ಟು ಪ್ರಾಮುಖ್ಯತೆ ನೀಡುತ್ತಾರೆ ಎನ್ನುವುದು ತಿಳಿದು ಬಂದಿದೆ. 10ರಲ್ಲಿ 8ಕ್ಕೂ ಅಧಿಕ ಮನೆಗಳು ಮನರೇಗಾ ಪ್ರತೀ ವರ್ಷ ಪ್ರತೀ ವ್ಯಕ್ತಿಗೂ 100 ದಿನಗಳ ಉದ್ಯೋಗ ಒದಗಿಸಬೇಕು ಎಂದು ಶಿಫಾರಸು ಮಾಡಿವೆ. ವ್ಯಾಪಕ ಅನುದಾನದ

ಕೊರತೆಯನ್ನೂ ನಾವು ಕಂಡುಕೊಂಡಿದ್ದೇವೆ. ಒಂದು ಸಾಮಾನ್ಯ ಅಂದಾಜಿನ ಪ್ರಕಾರ, ಲಾಕ್‌ಡೌನ್ ಮಾಡಿದ ನಂತರದ ವರ್ಷದಲ್ಲಿ ಕೆಲಸದ ಬೇಡಿಕೆಯ ನಿಜವಾದ ಪ್ರಮಾಣವನ್ನು ಗಮನಿಸಿದಲ್ಲಿ ಸಮೀಕ್ಷೆ ನಡೆಸಿದ ಬ್ಲಾಕ್ ಗಳಲ್ಲಿ ಹಂಚಿಕೆಗಳು ವಾಸ್ತವದಲ್ಲಿ ವರ್ಷದಲ್ಲಿ ಮೀಸಲಿಡಲಾದ ಮೊತ್ತದ ಮೂರುಪಟ್ಟು ಹೆಚ್ಚಿರಬೇಕು ಎಂದು ಕಂಡುಬಂದಿದೆ" ಎಂದು ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸಿಬ್ಬಂದಿ ಸದಸ್ಯ ಮತ್ತು ಅಧ್ಯಯನದ ಸಹಲೇಖಕರಾದ ರಾಜೇಂದ್ರನ್ ನಾರಾಯಣನ್ ಅಭಿಪ್ರಾಯಪಟ್ಟಿದ್ದಾರೆ.

ಮನರೇಗಾದ ಒಕ್ಕೂಟದ ಅಶ್ವಿನಿ ಕುಲಕರ್ಣಿ ಹೇಳುವ ಪ್ರಕಾರ, "ಹತಾಶೆಯ ಕಾಲದಲ್ಲಿ ಸಾಮಾಜಿಕ ರಕ್ಷಣೆ ಕ್ರಮ ಕೈಗೊಳ್ಳುವುದು ಮನರೇಗಾದ ಒಂದು ಉದ್ದೇಶವಾಗಿದೆ. ಕೋವಿಡ್ ಸಾಂಕ್ರಾಮಿಕ ರೋಗದ ಲಾಕ್‌ಡೌನ್ ಸೃಷ್ಟಿಸಿದ ಅಭೂತಪೂರ್ವ ಹತಾಶೆಯ ಸಂದರ್ಭದಲ್ಲಿ ಮನರೇಗಾ ನಿರೀಕ್ಷೆಯಂತೆಯೇ ಅಗತ್ಯಕ್ಕೆ ತಕ್ಕ ಕ್ರಮವಾಗಿತ್ತು ಮತ್ತು ಹಿಂದಿನ ವರ್ಷಗಳಿಗೆ ಹೋಲಿಸಿದರೆ ಹೆಚ್ಚು ಗ್ರಾಮಗಳಿಗೆ ಮತ್ತು ಅನೇಕ ಮನೆಗಳಿಗೆ ಕೆಲಸ ಒದಗಿಸಿದೆ. ಸಂಕಷ್ಟವನ್ನು ಕಡಿಮೆ ಮಾಡುವಲ್ಲಿ ಮನರೇಗಾದ ಪಾತ್ರವನ್ನು ಮತ್ತೊಮ್ಮೆ ಒತ್ತಿ ಹೇಳಲಾಗಿದೆ ಮತ್ತು ಸಾಂಕ್ರಾಮಿಕ ರೋಗದ ನಂತರದ ದಿನಗಳಲ್ಲಿ ಅತಿ ಪ್ರಮುಖ ಆದಾಯ ಹಾದಿಯಾಗಿ ಮುಂದುವರಿದಿದೆ. ನಾವು ಎಲ್ಲಾ ನಾಗರಿಕ ಸಮಾಜದ ಸಂಘಟನೆಗಳಿಗೆ ಜನರ ಧ್ವನಿಯನ್ನು ನೀತಿ ನಿರೂಪಕರಿಗೆ ತಲುಪಿಸುವ ಜವಾಬ್ದಾರಿಯಿದೆ. ಆ ಮೂಲಕ ಅನುಷ್ಠಾನದ ಪ್ರಕ್ರಿಯೆಯನ್ನು ಇನ್ನಷ್ಟು ತೀಕ್ಷ್ಣಗೊಳಿಸುವ ಅಗತ್ಯವಿದೆ. ಈ ವರದಿಯು ಆ ನಿಟ್ಟಿನಲ್ಲಿ ಒಂದು ಪ್ರಯತ್ನ."

ಸಮೀಕ್ಷೆಯ ಪ್ರಮುಖ ವಿಚಾರಗಳನ್ನು ಇಂದು ನವದೆಹಲಿಯಲ್ಲಿ ಬಿಡುಗಡೆ ಮಾಡಲಾಗಿದೆ. ಸಮೀಕ್ಷೆಯ ವಿವರವಾದ ವರದಿ ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸುಸ್ಥಿರ ಉದ್ಯೋಗ ಕೇಂದ್ರದ (ಸಿಎಸ್‌ಇ) ವೆಬ್ ತಾಣದಲ್ಲಿ https://cse.azimpremjiuniversity.edu.in/ ಲಭ್ಯವಿದೆ.

**ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯದ ಬಗ್ಗೆ**

ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯವನ್ನು 2010ರಲ್ಲಿ ಕರ್ನಾಟಕದ ಸರ್ಕಾರದ ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯ ಕಾಯ್ದೆಯಡಿ ಸ್ಥಾಪಿಸಲಾಗಿದೆ. ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಎನ್ನುವ ಮಂಡಳಿಯ ಪ್ರಾಯೋಜಕತ್ವದಲ್ಲಿ ವಿಶ್ವವಿದ್ಯಾಲಯವನ್ನು ಪೂರ್ಣವಾಗಿ ದತ್ತಿನಿಧಿ ಮತ್ತು ಆದಾಯವಿಲ್ಲದ ಸಂಸ್ಥೆಯಾಗಿ ಸ್ಪಷ್ಟವಾದ ಸಾಮಾಜಿಕ ಧ್ಯೇಯೋದ್ದೇಶಗಳಿಂದ ಸ್ಥಾಪಿಸಲಾಗಿದೆ. ಸಮಾನ, ಮಾನವೀಯ ಮತ್ತು ಸುಸ್ಥಿರ ಸಮಾಜದ ಕನಸನ್ನು ನನಸಾಗಿಸಲು ಕೊಡುವೆ ನೀಡುವ ಉದ್ದೇಶವನ್ನು ವಿಶ್ವವಿದ್ಯಾಲಯ ಹೊಂದಿದೆ.

----